## ಪ್ರಥಮ ದರ್ಜೆ ನ್ಯಾ ಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.

**ಸಿ.ಸಿ. ಸಂಖ್ಯೆಃ 537/2020**

ಫಿರ್ಯಾದಿದಾರ : ದೇವಪ್ಪ ಬಿನ್ ಲೇಟ್ ಕೆಂಪಪ್ಪ
ಸುಮಾರು 60 ವರ್ಷ ವಯಸ್ಸು,
ವಾಸಃ ಹನಗೋಡು ಗ್ರಾಮ, ಹೋಬಳಿ,
ಹುಣಸೂರು ತಾಲ್ಲೂಕು.

ವಿರುದ್ಧ,

ಆರೋಪಿ/ಗಳು : ಬ್ರಹ್ಮೇಶ ಬಿನ್ ಲೊಕೇಶ
ಸುಮಾರು 45 ವರ್ಷ ವಯಸ್ಸು,
ವಾಸಃ ಬಿಳಿಗೆರೆ ಗ್ರಾಮ, ಗಾವಡಗೆರೆ ಹೋಬಳಿ, ಹುಣಸೂರು
ತಾಲ್ಲೂಕು, ಮೈಸೂರು ಜಿಲ್ಲೆ

**ಆಪಾದನೆ**

ಆರೋಪಿಯಾದ ನೀವು, ಫಿರ್ಯಾದುದಾರರಿಂದ ನಿಮ್ಮ ಕಾನೂನುಬದ್ಧ ಅವಶ್ಯಕತೆಗಾಗಿ ರೂ.5,00,000/- ಹಣವನ್ನು ಸಾಲವಾಗಿ ಪಡೆದು, ಸದರಿ ಸಾಲದ ಹಣವನ್ನು ಮರುಪಾವತಿಸಲು, 09.01.2020 ರ ದಿನಾಂಕ ಇರುವ ಹುಣಸೂರು ತಾಲ್ಲುಡಕೂ ಎಸ್ ಬಿ ಐ ಬ್ಯಾಂಕಿನ ಶಾಖೆಯ ಚೆಕ್ ಸಂಖ್ಯೆ - 838707 ಅನ್ನು ನಮೂದಿಸಿ ರೂ.5,00,000/-ರ ಚೆಕ್ಕನ್ನು ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದುದಾರರು ದಿನಾಂಕ 09-01-2020 ರಂದು ತಮ್ಮ ಬ್ಯಾಂಕ್ ಖಾತೆ ಇರುವ ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕಿನ ಎಸ್ .ಬಿ ಐ ಶಾಖೆಯ ಗುರುಪುರ ಶಾಖೆ , ಹುಣಸೂರು ನಗಧೀಕರಣಕ್ಕಾಗಿ ಹಾಜರುಪಡಿಸಿದಾಗ, ಸದರಿ ಚೆಕ್ಕು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ "Funds Insufficient" ಎಂಬ ಹಿಂಬರಹದೊಂದಿಗೆ ಮಾನ್ಯವಾಗದೆ ದಿಃ 09-01-2020 ರಂದು ವಾಪಸ್ಸಾಗಿರುತ್ತದೆ. ಆದ್ದರಿಂದ ಫಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ದಿಃ 10.01.2020 ರಂದು ನೊಂದಾಯಿತ ಅಂಚೆ ಮೂಲಕ ನೊಟೀಸನ್ನು ಕಳುಹಿಸಿದ್ದು, ಸದರಿ ನೋಟೀಸ್ ದಿಃ 13.01.2020 ರಂದು ನಿಮಗೆ ಜಾರಿಯಾಗಿದ್ದರೂ ಅದಕ್ಕೆ ಉತ್ತರವನ್ನು ನೀಡಿರುವುದಿಲ್ಲ ಹಾಗೂ ಹಣವನ್ನು ಹಿಂದಿರುಗಿಸಿರುವುದಿಲ್ಲ. ಆದಕಾರಣ ನೀವು ಎನ್.ಐ ಆ್ಯಕ್ಟ್ ಕಲಂ 138 ರಂತೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆಪಾದನೆ ಮಾಡಲಾಗಿದೆ.

ಮೇಲ್ಕಂಡ ಅಪರಾದವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುವುದರಿಂದ, ನೀವು ಈ ನ್ಯಾಯಾಲಯದ ವಿಚಾರಣೆಗೆ ಒಳಪಡುತ್ತೀರಿ.

ಪ್ರಶ್ನೆ **1.** ಇದೀಗ ಓದಿ ವಿವರಿಸಿದ ಆಪಾದನೆ ನಿಮಗೆ ಅರ್ಥವಾಯಿತೆ**?**

ಉತ್ತರಃ

ಪ್ರಶ್ನೆ **2.** ಈ ಆಪಾದನೆಯ ಬಗ್ಗೆ ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ ಯಾವುದಾದರೂ ಪ್ರತಿ ರಕ್ಷಣೆ ಇದೆಯೇ**?**

ಉತ್ತರಃ

ದಿಃ **19-07-2022**

**(ಮನು ಪಟೇಲ್ ಬಿ.ವೈ,)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ದಂಢಾಧಿಕಾರಿಗಳು, ಹುಣಸೂರು